736 ಶ್ರೀಮತಿ ಕಲ್ಪನಾ ಸಿದ್ಧರಾಜು (ಮದ್ದೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ. ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಬಳಿ ಕೆಐಎಡಿಬಿ ಯವರು ರೈತರಿಂದ ವಶಪಡಿಸಿಕೊಂಡಿರುವ ಜಮೀನು ಎಷ್ಟು; ಮತ್ತು ಸರ್ಕಾರ ಇದಕ್ಕೆ ನಿಗದಿಪಡಿಸಿರುವ ದರ ಎಷ್ಟು;

ಆ) ಕೆಐಎಡಿಬಿಯವರು ರೈತರಿಂದ ವಶಪಡಿಸಿಕೊಂಡಿರುವ ಜಮೀನನ್ನು ಯಾವುದರ ಉಪಯೋಗಕ್ಕಾಗಿ ವಶಪಡಿಸಿಕೊಂಡಿರುತ್ತಾರೆ;

ಇ) ಕೆಐಎಡಿಬಿಯವರು ವಶಪಡಿಸಿಕೊಂಡಿರುವ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರ ನಿಗದಿಪಡಿಸಿರುವ ಹಾಗೂ ಬಿಡುಗಡೆ ಮಾಡಿರುವ ಅನುದಾನ ಮೊತ್ತ ಎಷ್ಟು;

ಈ) ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಯಾವ ಸಂಸ್ಥೆಯವರಿಗೆ ವಹಿಸಿಕೊಡಲಾಗಿದೆ; (ಗುತ್ತಿಗೆ ಆಧಾರದ ಹೆಸರು ಮತ್ತು ವಿಳಾಸವುಳ್ಳ ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಗ್ರಾಮದಲ್ಲಿ 86.08 ಎಕರೆ ಜಮೀನನ್ನು (ಖರಾಬು ಜಮೀನು ಸೇರಿ) ಮಂಡಳಿಯು ಭೂಸ್ವಾಧೀನ ಪಡಿಸಿದೆ. ಸದರಿ ಜಮೀನುಗಳಿಗೆ ಎಕರೆ ಒಂದಕ್ಕೆ ರೂ.4.50 ಲಕ್ಷದಂತೆ ಪರಿಹಾರ ಧನವನ್ನು ನಿಗದಿಪಡಿಸಿರುತ್ತದೆ.

ಆ) ಮಂಡಳಿಯು ಗೆಜ್ಜಲಗೆರೆ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಜಮೀನನ್ನು ವಶಪಡಿಸಿಕೊಂಡಿದ್ದು, ಇದರಲ್ಲಿ 60 ಎಕರೆ ಜಮೀನನ್ನು ಫುಡ್‌ಪಾರ್ಕ್ ಸ್ಥಾಪನೆಗಾಗಿ ಮೆ: ಗೋಲ್ಡನ್ ಹಾರ್ವೆಸ್ಟ್ ಫುಡ್‌ಪಾರ್ಕ್ ಸಂಸ್ಥೆಯವರಿಗೆ ಹಂಚಿಕೆ ಮಾಡಲಾಗಿತ್ತು. ಸದರಿ ಸಂಸ್ಥೆಯವರು ಜಮೀನಿನ ಬೆಲೆಯನ್ನು ನಿಗದಿತ ಅವಧಿಯೊಳಗೆ ಕಟ್ಟಲು ವಿಫಲರಾದುದರಿಂದ ಹಂಚಿಕೆಯನ್ನು ದಿನಾಂಕ: 4-6-2007 ರಂದು ರದ್ದುಪಡಿಸಲಾಯಿತು. ಹಾಗೂ ಸದರಿ ಜಮೀನನ್ನು ಈಗ ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸಿದೆ.

ಇ) ಗೆಜ್ಜಲಗೆರೆ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಸರ್ಕಾರದಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ. ಮಂಡಳಿಯ ವತಿಯಿಂದ ಒಟ್ಟು ರೂ. 8,45,86,703.00 ಗಳ ವೆಚ್ಚದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ.

ಈ) ಗೆಜ್ಜಲಗೆರೆ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಮೆ: ರೆಡ್ಡಿ ವೀರಣ್ಣ ಕನ್ಸ್‌ಟ್ರಕ್ಷನ್ ಪ್ರೈ. ಲಿ., ಕ್ಲಾಸ್-1 ಕಂಟ್ರಾಕ್ಟರ್, ಕ್ಲಾಸಿಕ್ ಕೋರ್ಟ್, 2ನೇ ಫ್ಲೋರ್, 9/1 ರಿಚ್‌ಮಂಡ್ ರಸ್ತೆ, ಬೆಂಗಳೂರು ಇವರಿಗೆ ವಹಿಸಿಕೊಡಲಾಗಿದೆ.

ಮಸ್ಕಿ ತಾಲ್ಲೂಕು ಮಾಡುವ ಬಗ್ಗೆ :

327 ಶ್ರೀ ಪ್ರತಾಪಗೌಡ ಪಾಟೀಲ್ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಸ್ಕಿ ವಿಧಾನಸಭಾ ಕ್ಷೇತ್ರ ಮೂರು ತಾಲ್ಲೂಕುಗಳನ್ನು ಒಳಗೊಂಡಿದ್ದು, ಆಡಳಿತಾತ್ಮಕವಾಗಿ ಕೆಲಸ ನಿರ್ವಹಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ಕ್ಷೇತ್ರವನ್ನು ಹೊಸ ತಾಲ್ಲೂಕಾಗಿ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮತ್ತು ಆ) ತಾಲ್ಲೂಕು ಪುನರ್ ರಚನೆ ಕುರಿತು ರಚಿಸಲಾಗಿದ್ದ ಶ್ರೀ ಎಂ.ಬಿ.ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿನ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಅದರಲ್ಲಿ ರಾಯಚೂರು ಜಿಲ್ಲೆಯಲ್ಲಿ ಮಸ್ಕಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ರಚಿಸಲು ಶಿಫಾರಸ್ಸು ಮಾಡಿದೆ.

ಸಮಿತಿಯ ಶಿಫಾರಸ್ಸುಗಳ ಮೇಲೆ ಸರ್ಕಾರ ಅಚಿತಿಮ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.